ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192 – 263462
ಫ್ಯಾಕ್ಸ್: 08192 – 260969
Website:www.taralabalukvk.com

ತ್ರೈಮಾಸಿಕ ಪತ್ರಿಕೆ
Quarterly News Letter
ಜುಲೈ– ಸೆಪ್ಟೆಂಬರ್ 2012

ಮಿಂಚಂಚೆ: dvgtkvk@yahoo.com
ಸಂಪುಟ–5 ಸಂಚಿಕೆ–4

## ಸಿಂಚನಕ್ಕೆ ಮುನ್ನ......

ಸಹೃದಯ ಬಂಧುಗಳೇ,

ಇದೊಂದು ಸಂದಿಗ್ಧ ಸಮಯ. ಎಲ್ಲರ ಮನಗಳು ದುಗುಡದಿಂದ ತುಂಬಿವೆ. ಮಳೆರಾಯ ಮತ್ತೊಮ್ಮೆ ಮುನಿದ. ಕೈಗೆ ಬಂದಿದ್ದು, ಬಾಯಿಗೆ ಬಾರದೆ ಹೋಯಿತು. ಇಂಥ ಸಂಕಟಮಯ ವಾತಾವರಣದಲ್ಲಿ, ಧೈರ್ಯಗುಂದದೇ ಇರುವುದು ಬಲು ಕಷ್ಟ ಸಾಧ್ಯ. ಕೃಷಿ, ಕೃಷಿಕರು, ಇದಕ್ಕೆ ಸಂಬಂಧಿಸಿದ ಎಲ್ಲರೂ ಗಾಬರಿಯಿಂದ ಮಾತು ಬರದೆ ಮೌನ ತಾಳಿರುವ ಸಂದರ್ಭವಿದು. ಕೋಟ್ಯಾಂತರ ಮೌಲ್ಯದ ಬೆಳೆಗಳ ನಾಶದ ದೃಶ್ಯ ಕಣ್ಮುಂದೆ ಬಂದು ಹೃದಯವನ್ನು ಹಿಂಡುತ್ತದೆ. ಖುಷಿಯ ಸಿಂಚನ ಮಾಡಲೆಂದು ಬರೆಯಲು ಕುಳಿತ ನನ್ನ ಬೆರಳುಗಳಿಗೆ ಮನಸ್ಸು ಸಹಕರಿಸುತ್ತಿಲ್ಲ. ಬೇಸರದ ಈ ಹೊತ್ತಿನಲ್ಲಿ ಒರಗಲು ನೆರವಾಗಬಹುದಾದ ಭುಜಗಳಾಗಿ ನಮ್ಮ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಕಾರ್ಯ ನಿರ್ವಹಿಸಲು ಪ್ರಯತ್ನಿಸಿದೆ.

ಪ್ರತಿ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಕೃಷಿ ಮಾಹಿತಿ ತಂತ್ರಜ್ಞಾನ ಸಪ್ತಾಹದ ಅಂಗವಾಗಿ ಕಾರ್ಯಕ್ರಮಗಳನ್ನು ಕೃಷಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿ, ಚಿಂತನ–ಮಂಥನ ಮಾಡಿರುತ್ತೇವೆ. ನೊಂದ ಹೃದಯಗಳ ಕೈ ಹಿಡಿದು ಧೈರ್ಯ ತುಂಬುವ ಯತ್ನಮಾಡಿದ್ದೇವೆ. ಪರ್ಯಾಯ ಪೂರಕ ಇಂಧನ – "ಜೈವಿಕ ಇಂಧನ"ದ ಬಗ್ಗೆ ಆಂದೋಲನದ ಮಾದರಿಯಲ್ಲಿ ಮಹಿಳಾ ಕೃಷಿಕರಲ್ಲಿ ಜಾಗೃತಿ ಮೂಡಿಸುವ ಕೆಲಸಗಳಾಗಿವೆ. ಭಾರತ ನವ ನಿರ್ಮಾಣ ಸ್ವಯಂ ಸೇವಕರುಗಳಿಗೆ ಕೆಲವಾರು ತರಬೇತಿಗಳನ್ನು ನಡೆಸಿದ್ದೇವೆ. ನಮ್ಮ ವೈಜ್ಞಾನಿಕ ತಂಡದ ಸದಸ್ಯರು ಸೂಕ್ತ ವಿಷಯದ ಬಗ್ಗೆ "ವಾರಕ್ಕೊಂದು ಚರ್ಚೆ ಕಾರ್ಯಕ್ರಮ" ಆರಂಭಿಸಿದ್ದಾರೆ. 'ಪಾರ್ಥೇನಿಯಂ ತಿಳುವಳಿಕೆ ಸಪ್ತಾಹ' ಆಯೋಜಿಸಿದ್ದೆವು. 'ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ' ಯನ್ನು ಮೀನುಗಾರಿಕಾ ಇಲಾಖೆ ಸಹಯೋಗದಲ್ಲಿ ಆಚರಿಸಿದ್ದೇವೆ. ಅನೇಕ ಪ್ರಮುಖ ವರದಿಗಳನ್ನು ತಯಾರಿಸಿದ ತ್ರೈಮಾಸಿಕ ಅವಧಿಯಿದು. ಮೀನು ಕೃಷಿ ವಿಭಾಗದಲ್ಲಿ ಕೆಲವು ಪ್ರಮುಖ ಕೆಲಸಗಳಾಗಿವೆ. ಭತ್ತ ಮತ್ತು ಮೀನು ಸಮಗ್ರ ಕೃಷಿ ಪ್ರಾತ್ಯಕ್ಷಿಕೆ ಎರಡನೇ ವರ್ಷಕ್ಕೆ ಮಂದಹಾಸದೊಂದಿಗೆ ಕಾಲಿಟ್ಟಿದೆ. ಇದರಲ್ಲಿ ಬೆಳೆದ ಭತ್ತವನ್ನು ಅಕ್ಕಿಯನ್ನಾಗಿಸಿ ಮಾರಾಟ ಮಾಡಿದ್ದು ಪ್ರಥಮ ಪ್ರಯತ್ನ. ದೊಡ್ಡ ಹೊಂಡದಲ್ಲಿ 3 ಕ್ವಿ. ತಿನ್ನೋ ಮೀನು ಹಿಡಿದು ಮಾರಾಟವಾಗಿದ್ದು ಜಾತ್ರೆಯಂತಿತ್ತು. ಕಡಿಮೆ ನೀರು ಕೇಳುವ ನವಣೆ (HMT-100-1) ಬೆಳೆದು ನಿಂತಿದೆ (ಕದಳಿವನದಲ್ಲಿ). ಅಡಿಕೆ ಫಸಲು ಶುರುವಾಗಿದೆ (ಕೇಸರಿವನದಲ್ಲಿ). ಕಬ್ಬು ಕಟಾವಿಗೆ ಸಿದ್ಧವಾಗಿದೆ. ನಾಟಿ ಮಾಡಿದ ತೊಗರಿ ತಳಿ (MRC-2) ಸೊಗಸಾಗಿ ಬೆಳೆಯುತ್ತಿದೆ. ದಾರಿಗುಂಟ ಹೂವಿನ ಗಿಡಗಳನ್ನು ಬೆಳೆಸುವ ಅಲಂಕಾರಿಕ ಪ್ರಯತ್ನ ನಡೆದಿದೆ. ಬರುವ ನವೆಂಬರ್‌ನಲ್ಲಿ ಕೃಷಿ ವಿಜ್ಞಾನ ಕೇಂದ್ರಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ನಮ್ಮ ಕೃಷಿ ವಿಜ್ಞಾನ ಕೇಂದ್ರಕ್ಕೆ ವಸ್ತು ಪ್ರದರ್ಶನ ಮಳಿಗೆ ಇರಿಸಲು ಆಹ್ವಾನಿಸಿರುವುದು ಹೆಮ್ಮೆಯ ಸಂಗತಿ. ಅದರ ತಯಾರಿಯಲ್ಲಿ ಸ್ವಲ್ಪ ಮುಳುಗಿದ್ದೇವೆ. ಈಗ ಕೃಷಿಗೊದಗಿರುವ ಕಷ್ಟಕರ ಸಂದರ್ಭದಲ್ಲಿ ಬದುಕಿನ ಚೈತನ್ಯವನ್ನು ಕುಸಿಯದಂತೆ ತಡೆ ದೇವಾ ಎಂದು ಪ್ರಕೃತಿ ದೇವರಲ್ಲಿ ಪ್ರಾರ್ಥಿಸುತ್ತಾ ನಿಮಗೆ ನಮಿಸುತ್ತೇನೆ.

–ಪ್ರೀತಿಯಿಂದ

**ಡಾ. ದೇವರಾಜ ಟಿ.ಎನ್.**
ಕಾರ್ಯಕ್ರಮ ಸಂಯೋಜಕರು

## ಕೃಷಿ ತಂತ್ರಜ್ಞಾನ ಸಪ್ತಾಹ -2012

ಕೇಂದ್ರವು ಕೃಷಿ ಇಲಾಖೆ, ಕೃಷಿಕ ಸಮಾಜ, ದಾವಣಗೆರೆ ಇವರ ಸಹಯೋಗದಲ್ಲಿ "ತಡ ಮುಂಗಾರಿಗೆ ಪರ್ಯಾಯ ಕೃಷಿ ಪದ್ಧತಿಗಳು" ಎಂಬ ಮೂಲ ವಿಷಯವಿಟ್ಟುಕೊಂಡು ಪ್ರತಿ ತಾಲ್ಲೂಕಿನಲ್ಲಿ ಒಂದು ಹಳ್ಳಿ ಆಯ್ಕೆ ಮಾಡಿಕೊಂಡು ಕೃಷಿ ತಂತ್ರಜ್ಞಾನ ಸಪ್ತಾಹ 2012 ಹಮ್ಮಿಕೊಳ್ಳಲಾಗಿತ್ತು.



ಸುಸ್ಥಿರ ಅಡಿಕೆ ಇಳುವರಿಗೆ ಸಾವಯುವ ಕೃಷಿ ಕ್ರಮಗಳು ಸಂವಾದ ಕಾರ್ಯಕ್ರಮ
ಕುಕ್ಕುವಾಡ, ದಾವಣಗೆರೆ ತಾ||.



ಮೆಕ್ಕೆಜೋಳ ತಾಕಿಗೆ ಕ್ಷೇತ್ರ ಭೇಟಿ
ಮಧುರನಾಯಕನಹಳ್ಳಿ, ಚನ್ನಗಿರಿ ತಾ||.



ತರಕಾರಿ ಬೆಳೆಗಳ ಸುರಕ್ಷಿತ ಸಾಗುವಳಿ ಮತ್ತು ಮಾರಾಟ ವಿಚಾರ ವಿನಿಮಯ
ನ್ಯಾಮತಿ, ಹೊನ್ನಾಳಿ ತಾ||.



ಕೃಷಿ ವಸ್ತು ಪ್ರದರ್ಶನ
ಹುಲಿಕಟ್ಟೆ, ಹರಪನಹಳ್ಳಿ ತಾಲ್ಲೂಕು.



ಹತ್ತಿ ಬೆಳೆಯಲ್ಲಿ ಗುಂಪು ಚರ್ಚೆ
ಗೌಡಗೊಂಡನಹಳ್ಳಿ, ಜಗಳೂರು ತಾ||.




ಸಮಗ್ರ ಕೃಷಿ ಪದ್ಧತಿ ಅನಿವಾರ್ಯವೇ ವಿಚಾರ ಸಂಕೀರ್ಣ
ಕೆಂಚನಹಳ್ಳಿ, ಹರಿಹರ ತಾ||.

ಎಸ್. ಜಿ. ಎಸ್. ವೈ ಯೋಜನೆ ಜಿಲ್ಲಾ ಪಂಚಾಯತ್ ಇವರು ಪ್ರಾಯೋಜಿತ **'ಸಮಗ್ರ ಹೈನುಗಾರಿಕೆ ಮತ್ತು ಎರೆಗೊಬ್ಬರ ತಯಾರಿಕೆ ಪರಿಣಿತ ತರಬೇತಿ'** ಯನ್ನು ಸ್ವ-ಸಹಾಯ ಸಂಘದ 44 ಮಹಿಳಾ ಸದಸ್ಯರುಗಳಿಗೆ 6 ದಿನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.



ಸಮಗ್ರ ಹೈನುಗಾರಿಕೆ ತರಬೇತಿ



ಮೇವು ಕತ್ತರಿಸುವ ಯಂತ್ರದ ಪದ್ಧತಿ ಪ್ರಾತ್ಯಕ್ಷಿಕೆ

## ಆಚರಿಸಿದ ವಿಶೇಷ ದಿನಾಚರಣೆಗಳು



ದಿನಾಂಕ 10-07-2012ರಂದು ಮೀನುಗಾರಿಕೆ ಇಲಾಖೆ ದಾವಣಗೆರೆ ಇವರ ಸಹಯೋಗದಲ್ಲಿ "ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ" ಆಚರಿಸಲಾಯಿತು.



ದಿನಾಂಕ 31-07-2012 ರಂದು ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದಲ್ಲಿ "ಜೈವಿಕ ಇಂಧನದ ಮಾಹಿತಿಯ ಜಾಗೃತಿ ಮೇಳವನ್ನು" ಹಮ್ಮಿಕೊಳ್ಳಲಾಗಿತ್ತು.



ಕೇಂದ್ರದ ತಜ್ಞರು ಹರಿಹರದ ತಾಲ್ಲೂಕು ಪಂಚಾಯಿತಿಯಲ್ಲಿ ಹಮ್ಮಿಕೊಂಡಿದ್ದ "ಭಾರತ ನವ ನಿರ್ಮಾಣ ಸ್ವಯಂ ಸೇವಕರುಗಳಿಗೆ" ಕೃಷಿ ಅಭಿವೃದ್ಧಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಪಾತ್ರ ಎಂಬ ವಿಷಯದಲ್ಲಿ 6 ತರಬೇತಿಗಳನ್ನು ನೀಡಿದರು.



ದಿನಾಂಕ 10-08-2012 ರಂದು "ವಿಶ್ವ ಜೈವಿಕ ಇಂಧನ ದಿನಾಚರಣೆ" ಯನ್ನು ದಾವಣಗೆರೆ ತಾಲ್ಲೂಕು ಕಂದನಕೋವಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಜೈವಿಕ ಇಂಧನದ ಸಸಿಗಳನ್ನು ನೆಡಲಾಯಿತು.

**ಕೇಂದ್ರದಲ್ಲಿ ದಿನಾಂಕ 16-8-2012 ರಿಂದ 22-8-2012 ರವರೆಗೆ 'ಪಾರ್ಥೇನಿಯಂ ನಿರ್ಮೂಲನ ಸಪ್ತಾಹ' ಹಮ್ಮಿಕೊಳ್ಳಲಾಗಿತ್ತು.**



ದಾವಣಗೆರೆ ಹೈನುಗಾರಿಕೆ ರೈತರ ಕೂಟ (ರಿ.) ಪ್ರಾರಂಭಿಸಲಾಗಿದೆ ಕೂಟದ ಸದಸ್ಯರುಗಳಿಗೆ ವಿಚಾರ ಸಂಕೀರ್ಣ.



ಕೇಂದ್ರದ ತಜ್ಞರು ಧನುಕ ಅಗ್ರಿಟೆಕ್ ಲಿಮಿಟೆಡ್‌ನ ಕ್ಷೇತ್ರ ಸಹಾಯಕರಿಗೆ "ಭತ್ತದಲ್ಲಿ ಸಮಗ್ರ ಕೀಡೆ ನಿರ್ವಹಣೆ" ಬಗ್ಗೆ ಮಾಹಿತಿ ನೀಡಿದರು.

# ರೈತರಿಗೆ ಕೃಷಿ ಮುನ್ಸೂಚನೆಗಳು

### ತಿಂಗಳ ಹುರುಳಿಯಲ್ಲಿ ಹೊಸ ತಳಿಯ ಪರಿಚಯ

ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಬೆಂಗಳೂರು ಇವರು ಅಭಿವೃದ್ಧಿ ಪಡಿಸಿರುವ ಅಧಿಕ ಇಳುವರಿ ಕೊಡುವ ತಿಂಗಳ ಹುರುಳಿ ತಳಿ "ಅರ್ಕಾ ಸುವಿಧ" ವನ್ನು ಚಳಿಗಾಲದಲ್ಲಿ ಬೆಳೆಯಬಹುದು. ತಳಿಯ ಗಿಡಗಳು ಗಿಡ್ಡವಾಗಿದ್ದು ವರ್ಷದ ಎಲ್ಲಾ ಕಾಲಗಳಲ್ಲೂ ಬೆಳೆಯಲು ಸೂಕ್ತ, ಕಾಯಿಗಳು ನೇರವಾಗಿ ಗುಂಡಾಗಿದ್ದು, ತಿಳಿ ಹಸಿರು ಬಣ್ಣದಿಂದ ಕೂಡಿವೆ. ಈ ತಳಿಯಲ್ಲಿ ನಾರು ಇರುವುದಿಲ್ಲ, ಬೆಳೆಯ ಅವಧಿ 70 ದಿನಗಳಿದ್ದು, ಹೆಕ್ಟೇರಿಗೆ 19 ಟನ್ ಇಳುವರಿಯನ್ನು ನಿರೀಕ್ಷಿಸಬಹುದು. ಈ ತಳಿಯನ್ನು ನಮ್ಮ ಜಿಲ್ಲೆಯಾದ್ಯಂತ ಬೆಳೆಯಲು ಸೂಕ್ತವಾದ ವಾತಾವರಣವಿರುತ್ತದೆ.

### ಅಡಿಕೆ ತೋಟಗಳಲ್ಲಿ ಹಸಿರೆಲೆ ಗೊಬ್ಬರಗಳು

ಅಡಿಕೆ ತೋಟಗಳಲ್ಲಿ ಕೊಯ್ಲು ಮುಗಿಯುತ್ತಾ ಬಂದಿದ್ದು, ರೈತರು ಗಿಡದಲ್ಲಿ ಕೊನೆಯದಾಗಿ ಬರುವ ಕುಂಚಗಳನ್ನು ತೆಗೆದು ಹಾಕಬೇಕು. ತೋಟವನ್ನು ಸ್ವಚ್ಛಮಾಡಿ ಯಾವುದಾದರೂ ಹಸಿರೆಲೆ ಗೊಬ್ಬರ ಗಿಡವನ್ನು (ಸೆಣಬು, ಡಯಾಂಚ, ವೆಲ್‌ವೆಟ್ ಬೀನ್ಸ್) ಅಂತರ ಬೆಳೆಯಾಗಿ ಬಿತ್ತನೆ ಮಾಡಬಹುದು. ಇದರಿಂದ ಕಳೆಯ ಹಾವಳಿಯು ಕಡಿಮೆಯಾಗಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಹಾಯವಾಗುತ್ತದೆ.

### ಬಾಳೆಗೊನೆಗೆ ಪೋಷಕಾಂಶ ಪೂರೈಕೆ ಕ್ರಮ:-

ಬಾಳೆಯಲ್ಲಿ ಹಣ್ಣಿನ ಗೊನೆಯು ಹೊರಚಾಚಿ, ಕಾಯಿಗಳು ಹಿಡಿದ ಕೂಡಲೇ ಹೂ ಮೊಗ್ಗನ್ನು ಕಡಿದು ಹಾಕುವುದು ಒಂದು ಮುಖ್ಯ ಅಂಶವಾಗಿದೆ. ಏಕೆಂದರೆ, ಹೂವು ಅಧಿಕ ಪ್ರಮಾಣದಲ್ಲಿ ಬಾಳೆಯಿಂದ ಶಕ್ತಿ ಹಾಗೂ ಪೋಷಕಾಂಶಗಳನ್ನು ಹೀರಿಹಾಕುತ್ತದೆ.

ಹೂ ಮೊಗ್ಗನ್ನು ಕಡಿದ ದಿಂಡಿನ ಭಾಗವನ್ನು, ಅರ್ಧ ಕೆ.ಜಿ. ತಾಜಾ ಸಗಣಿ ಮತ್ತು 2.5 ಗ್ರಾಂ ಯೂರಿಯಾ ಹಾಗೂ ಸಲ್ಫೇಟ್ ಆಫ್ ಪೊಟ್ಯಾಷ್‌ಗೆ ತಕ್ಕಷ್ಟು ನೀರು ಸೇರಿಸಿ ಚೆನ್ನಾಗಿ ಕಲಕಿ, 15 X 25 ಸೆಂ.ಮೀ. ಅಳತೆಯ ಪ್ಲಾಸ್ಟಿಕ್ ಚೀಲದಲ್ಲಿಟ್ಟು, ಕಡಿದ ದಿಂಡನ್ನು ಮುಳುಗಿಸಿ, ಚೀಲವನ್ನು ಭದ್ರವಾಗಿ ಕಟ್ಟಬೇಕು. ರೋಬಸ್ಟಾ ಬಾಳೆಗೆ ಅರ್ಧ ಕೆ.ಜಿ. ತಾಜಾ ಸಗಣಿಯಲ್ಲಿ ತಲಾ 7.5 ಗ್ರಾಂ ಯೂರಿಯಾ ಹಾಗೂ ಸಲ್ಫೇಟ್ ಆಫ್ ಪೊಟ್ಯಾಷ್ ಸಾಕು. ಗ್ರಾಂಡ್ ನೈನ (ಜಿ-9) ಬಾಳೆಯಲ್ಲಿ ತಲಾ 10 ಗ್ರಾಂ ನಷ್ಟು ಯುರಿಯಾ ಹಾಗೂ ಸಲ್ಫೇಟ್ ಆಫ್ ಪೊಟ್ಯಾಷ್ ಬೇಕಾಗುತ್ತದೆ. ಈ ರೀತಿ ಕಟ್ಟಿದ ಚೀಲವನ್ನು ಕೊಯ್ಲಿನ ಸಮಯದಲ್ಲಿ ತೆಗೆಯಬಹುದು. ಈ ವಿಧಾನವನ್ನು ಅನುಸರಿಸಿ ಬಾಳೆ ಗೊನೆಯ ಪೋಷಣೆ ಮಾಡುವುದರಿಂದ ಏಲಕ್ಕಿ ಬಾಳೆಯಲ್ಲಿ 2-3 ಕೆ.ಜಿ. ರೊಬಸ್ಟಾ ಹಾಗೂ ಗ್ರಾಂಡ್ ನೈನ್ ತಳಿಯಲ್ಲಿ 3-5 ಕೆ.ಜಿ. ಗೊನೆಯ ತೂಕ ಹೆಚ್ಚುವುದು.

### ಭತ್ತ – ಕಂದು ಜಿಗಿ ಹುಳು

ಪ್ರೌಢ ಮತ್ತು ಅಪ್ಸರೆ ಕೀಟಗಳು ಕಾಂಡ / ಎಲೆ ಕವಚದ ಮೇಲಿಂದ ರಸ ಹೀರುತ್ತವೆ. ಗರಿಗಳು ಹಳದಿ ಬಣ್ಣಕ್ಕೆ ತಿರುಗಿ ಪೈರು ಸುಟ್ಟಂತೆ ಮತ್ತು ಕುಸಿದಂತೆ ಕಾಣುತ್ತದೆ. ಕಾಳು ಜೊಳ್ಳಾಗಿ ಇಳುವರಿ ಕುಂಠಿತವಾಗುತ್ತದೆ. ಬಾಧೆಗೊಳಗಾದ ಕಾಂಡದ ಮೇಲೆ ಜಿಗಿಹುಳುವಿನ ಬಿಳಿ ಪೊರೆ ಮತ್ತು ಜೋನಿಯಂತಿರುವ ಜಿಗುಟಾದ ವಸ್ತು ಕಂಡುಬರುತ್ತದೆ.

**ಹತೋಟಿ:** ಬಾಧೆ ಹೆಚ್ಚಾದಾಗ ಗದ್ದೆಯಿಂದ ನೀರು ಬಸಿದು ಹೊರ ತೆಗೆಯಬೇಕು. ಬುಪ್ರೊಫೆಜಿನ್ 1 ಮಿಲೀ./ಲೀ. ಅಥವಾ ಥಯೋಮಿಥಾಕ್ಸಾಂ 0.5 ಗ್ರಾಂ/ಲೀ. ನೀರಿಗೆ ಬೆರಸಿ ಸಿಂಪಡಿಸಬೇಕು.

**ಕುತ್ತಿಗೆ ರೋಗ:** ಎಲೆ, ಗಿಣ್ಣು, ತೆನೆಯ ದೇಟು, ತೆನೆ ಮತ್ತು ಕಾಳುಗಳ ಮೇಲೆ ರೋಗದ ಚಿಹ್ನೆಗಳು ಕಾಣಿಸುತ್ತದೆ. ಎಲೆಯ ಮೇಲೆ ಕಂದು ಚುಕ್ಕೆಗಳು ಕಂಡು ರೋಗ ಹೆಚ್ಚಾದಾಗ ಎಲೆಗಳು ಒಣಗುತ್ತವೆ. ರೋಗವು ತೆನೆಯ ಬುಡದ ಗಣ್ಣಿಗೆ ತಗುಲಿ ಆ ಭಾಗ ಕಪ್ಪಾಗಿ ತೆನೆ ಮುರಿದು ಬೀಳುತ್ತವೆ.

**ಹತೋಟಿ:** ಬದುವಿನ ಮೇಲಿರುವ ಕಳೆಗಳನ್ನು ನಾಶಪಡಿಸಬೇಕು.

ತೆನೆ ಹೊರ ಬರುವಾಗ ಮತ್ತು ಕಾಳು ಕಟ್ಟುವ ಸಮಯದಲ್ಲಿ ಟ್ರೈಸೈಕ್ಲಜೋಲ್ 0.6 ಗ್ರಾಂ/ಲೀ. ನೀರಿಗೆ ಬೆರಸಿ ಸಿಂಪಡಿಸಬೇಕು.

### ಬಾಳೆ: ಎಲೆ ತಿನ್ನುವ ಹುಳು:

ಮರಿಹುಳುಗಳು ಎಲೆಗಳ ಹಿಂಭಾಗ ಮತ್ತು ಸುಳಿ ಎಲೆಗಳಲ್ಲಿ ರಂಧ್ರ ಮಾಡಿ ಹಸಿರು ಭಾಗವನ್ನು ತಿನ್ನುತ್ತವೆ. ಎಲೆಗಳ ಬೆಳವಣಿಗೆ ಕಡಿಮೆಯಾಗಿ ಇಳುವರಿ ಕುಂಠಿತಗೊಳ್ಳುತ್ತದೆ.

**ಹತೋಟಿ:** ಕೀಟಬಾಧಿತ ಎಲೆಗಳನ್ನು ಹುಳುಗಳ ಸಮೇತ ಕಿತ್ತು ನಾಶಪಡಿಸಬೇಕು. ಥಯೋಡಿಕಾರ್ಬ್ 1 ಗ್ರಾಂ/ಲೀ. ಅಥವಾ ಕ್ಲೋರ್‌ಪೈರಿಫಾಸ್ 2 ಮಿಲೀ./ಲೀ. ನೀರಿಗೆ ಬೆರಸಿ ಸಿಂಪಡಿಸಬೇಕು.

### ಪಶುವಿಜ್ಞಾನ

* ಹೈನುಗಾರಿಕೆಗೆ ಸೂಕ್ತವಾದ ದ್ವಿದಳ ಧಾನ್ಯದ ಮೇವಿನ ಬೆಳೆಯಾದ ಕುದುರೆ ಮೆಂತೆ (Lucerne) ಯನ್ನು ಬಿತ್ತನೆ ಮಾಡಲು ಇದು ಸೂಕ್ತ ಸಮಯವಾಗಿರುತ್ತದೆ. ಒಂದೂವರೆ ಅಡಿ ಸಾಲಿನಲ್ಲಿ ಕುದುರೆಮೆಂತೆ ಬೀಜವನ್ನು 1 ಅಂಗುಲ ಆಳದಲ್ಲಿ ಬಿತ್ತನೆ ಮಾಡಬೇಕು
* ಜಾನುವಾರುಗಳಿಗೆ ಕಾಲು-ಬಾಯಿ ಬೇನೆಯ ವಿರುದ್ಧ ಚುಚ್ಚು ಮದ್ದು ಹಾಕಿಸಲು ಇದು ಸೂಕ್ತವಾದ ಸಮಯವಾಗಿರುತ್ತದೆ.
* ವೈಜ್ಞಾನಿಕವಾಗಿ ಕುರಿಸಾಕಣೆ ಮತ್ತು ಹೈನುಗಾರಿಕೆ ಮಾಡುವಂತಹ ರೈತರುಗಳು ಮೆಕ್ಕೆಜೋಳದಿಂದ ತಯಾರಿಸಿದ ರಸಮೇವನ್ನು ಬಳಸಿ ಮಾಡುವುದರಿಂದ ಉತ್ಪಾದನಾ ವೆಚ್ಚ ತಗ್ಗಿಸಬಹುದಾಗಿದೆ.
* ಹೆಚ್ಚು ಹಾಲು ಹಿಂಡುವ ರಾಸುಗಳಿಗೆ ಪ್ರತಿದಿನ 50 ಗ್ರಾಂ ಖನಿಜ ಮಿಶ್ರಣ ಪುಡಿಯನ್ನು ತಪ್ಪದೆ ನೀಡುವುದು ಸೂಕ್ತ, ಇದರಿಂದ ಹೈನುರಾಸುಗಳಿಗೆ ಬರುವ ಹಾಲಿನ ಜ್ವರವನ್ನು ತಪ್ಪಿಸಬಹುದು.
* ಕುರಿಗಳಿಗೆ ಕರುಳುಬೇನೆ ತಡೆಗಟ್ಟಲು ಚುಚ್ಚುಮದ್ದು ಹಾಕಿಸಲು ಇದು ಸೂಕ್ತ ಸಮಯ. ರೈತಬಾಂಧವರು ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆಯನ್ನು ಸಂಪರ್ಕಿಸಿ ಉಚಿತವಾಗಿ ಲಸಿಕೆಯನ್ನು ಪಡೆಯಬಹುದಾಗಿದೆ.

### ಮೀನುಕೃಷಿ:

* ಕೊಳಗಳಲ್ಲಿ ಮೀನು ಕೃಷಿ ಕೈಗೊಂಡಿರುವ ರೈತರು, ಮೀನುಗಳ ಆಹಾರ ಸ್ವೀಕರಣೆ, ಈಜಾಟ, ಉಸಿರಾಟ ಕ್ರಿಯೆ ಇವುಗಳು ಅಸಾಮಾನ್ಯವಾಗಿರದಂತೆ ನೋಡಿಕೊಳ್ಳಬೇಕು.
* ಮೀನುಗಳ ಸರಾಸರಿ ದೇಹ ತೂಕ ಗಳಿಕೆಯ ಪ್ರಮಾಣವನ್ನು ಪರೀಕ್ಷಿಸಬೇಕು. ಮೇಲು ಆಹಾರ ನೀಡುವಿಕೆಯನ್ನು ಈಗ ಹೆಚ್ಚಿಸಬಾರದು. ಚೀಲದಲ್ಲಿ ಕೊಡುವ ಪದ್ಧತಿ ರೂಢಿಸಬೇಕು.
* ಚಳಿಗಾಲದಲ್ಲಿ ಬೆಳಗಿನ ಜಾವ ಆಮ್ಲಜನಕದ ಕೊರತೆಯಿಂದಾಗುವ ಸಾಧ್ಯತೆಗಳಿದ್ದು, ಹೊಸ ನೀರನ್ನು ಸೇರಿಸಬೇಕು.

ಪ್ರಧಾನ ಸಂಪಾದಕರು:
ಡಾ. ದೇವರಾಜ ಟಿ.ಎನ್.

ಸಂಪಾದಕರು:
ಶ್ರೀ ಪ್ರಸನ್ನಕುಮಾರ ಎನ್., ಶ್ರೀ ಬಸವನಗೌಡ ಎಂ.ಜಿ.,
ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಶ್ರೀ ರಘುರಾಜ ಜೆ.,

ಪ್ರಕಾಶಕರು: ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ-577004, ಕರ್ನಾಟಕ

ಗಾಂಧಿನಗರ ಆಫ್‌ಸೆಟ್ ಪ್ರಿಂಟರ್ಸ್, ಎಲ್ ಆರ್ ರಸ್ತೆ, ದಾವಣಗೆರೆ. ಮೊ : 9945198893